ಹೋದವರ್ಷದ 117 ಲಕ್ಷ ರೂಪಾಯಿಗಳ ಕೆಲಸ ಅಲ್ಲದೆ, ನಮ್ಮಲ್ಲಿ ಕೆಡಿಪಿ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದಾಗ ಅವರು ಅದು ಲ್ಯಾಪ್ಸ್ ಆಗುತ್ತದೆ, ಈ ಸಾರಿ ಈ ಹಣಕ್ಕೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇದನ್ನು ಸ್ಪಷ್ಟಪಡಿಸ ಬೇಕೆಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಯೋಜನಾ ಅವಧಿಯಲ್ಲಿ ನಾವು ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಮಾಡಿದ್ದೇವೋ ಅದನ್ನು ನಾವು ಮಾಡುತ್ತೇವೆ. ನನಗೆ ಗೊತ್ತಿರುವ ಹಾಗೆ ಆ ಹಣವು ಲ್ಯಾಪ್ಸ್ ಆಗತಕ್ಕಂಥ ಸಂದರ್ಭ ಇಲ್ಲ.

ಅಧ್ಯಕ್ಷರು : ಅಂದರೆ, ಪ್ರಾರಂಭಿಕ ವರ್ಷದಲ್ಲಿ ಮಾತ್ರ ತೊಂದರೆಯಾಗಿದೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ತಮ್ಮ ಪ್ರಶ್ನೆಯನ್ನು ವಸತಿ ಸಚಿವರಿಗೆ ಕೇಳಿದ್ದೀರಿ. ಅದು ನಗರಾಭಿವೃದ್ಧಿ ಸಚಿವರ ವ್ಯಾಪ್ತಿಗೆ ಬರುವುದರಿಂದ ಅವರ ಇಲಾಖೆಯ ಪ್ರಶ್ನೆಗಳು ಇರುವ ದಿನ ಲಿಸ್ಟ್ ಪ್ರಕಾರ ತೆಗೆದುಕೊಳ್ಳೋಣ.

ರೈತರಿಗೆ ಟ್ರ್ಯಾಕ್ಟರ್ ಮತ್ತು ಟಿಲ್ಲರ್‌ಗಳ ವಿತರಣೆ.

298 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶನ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರ ರೈತರಿಗೆ ಈಗ ನೀಡಲಾಗುತ್ತಿರುವ ಟ್ರಾಕ್ಟರ್ ಮತ್ತು ಟಿಲ್ಲರ್‌ಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಕೋಲಾರ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ವಿತರಣೆ ಮಾಡಲಾಗುತ್ತಿದೆ.

ಇ) ಹೆಚ್ಚಾಗಿ ವಿತರಿಸಲು ಸರ್ಕಾರ ಬಯಸಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಮೂಲಕ 1996-97ನೇ ಸಾಲಿನಲ್ಲಿ ವಿತರಿಸಲಾದ ಟ್ರ್ಯಾಕ್ಟರ್ ಹಾಗೂ ಪವರ್ ಟಿಲ್ಲರ್‌ಗಳ ಸಂಖ್ಯೆ ಹಾಗೂ 1997-98ನೇ ಸಾಲಿನಲ್ಲಿ ಇವುಗಳ ವಿತರಣೆಗೆ ಹಾಕಿ ಕೊಳ್ಳಲಾಗಿರುವ ಗುರಿಯು ಈ ರೀತಿ ಇದೆ :-

	1998-97ರಲ್ಲಿ ವಿತರಿಸಲಾದ ಸಂಖ್ಯೆ	*1997-98ನೇ ಸಾಲಿನ ಗುರಿ*
ಅ) ಟ್ರ್ಯಾಕ್ಟರ್	690	416
ಆ) ಪವರ್ ಟಿಲ್ಲರ್	240	266

ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಅ) ಕೋಲಾರ ಜಿಲ್ಲೆಯಲ್ಲಿ 1996-97ನೇ ಸಾಲಿನಲ್ಲಿ ತಾಲ್ಲೂಕುವಾರು ವಿತರಿಸಲಾದ ಟ್ರ್ಯಾಕ್ಟರ್ ಹಾಗೂ ಪವರ್ ಟಿಲ್ಲರ್‌ಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

	ತಾಲ್ಲೂಕು	ಟ್ರ್ಯಾಕ್ಟರ್	ಪವರ್ ಟಿಲ್ಲರ್
1.	ಕೋಲಾರ	2	3
2.	ಶ್ರೀನಿವಾಸಪುರ	2	-
3.	ಬಾಗೇಪಲ್ಲಿ	1	2
4.	ಶಿಡ್ಲ ಘಟ್ಟ	4	2
5.	ಚಿಕ್ಕಬಳ್ಳಾಪುರ	2	1
6.	ಮುಳಬಾಗಿಲು	4	2
7.	ಮಾಲೂರು	4	2
8.	ಚಿಂತಾಮಣಿ	3	4
9.	ಬಂಗಾರಪೇಟೆ	1	-
10.	ಗೌರಿಬಿದನೂರು	-	2
		23	**18**

1997-98ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ನಿಗಧಿಗೊಳಿಸಿರುವ ಪವರ್ ಟಿಲ್ಲರ್ ಮತ್ತು ಸಣ್ಣ ಟ್ರಾ ಕ್ಟರ್ ಗಳ ವಿವರಣಾ ಗುರಿಯನ್ನು ಅನುಬಂಧ - ರಲ್ಲಿ ನೀಡಲಾಗಿದೆ.

ಇ) ಹೌದು

ಅನುಬಂಧ - 1

1997-98ನೇ ಸಾಲಿನಲ್ಲಿ ಜಿಲ್ಲಾವಾರು ಪವರ್ ಟಿಲ್ಲರ್ ಮತ್ತು ಸಣ್ಣ ಟ್ರಾಕ್ಟರ್‌ಗಳನ್ನು ಸಹಾಯದ ಧನ ರೂಪದಲ್ಲಿ ವಿತರಿಸಲು ಹಮ್ಮಿಕೊಂಡಿರುವ ಭೌತಿಕ ಗುರಿ.

ಕ್ರಮ ಸಂಖ್ಯೆ.	ಜಿಲ್ಲೆಯ ಹೆಸರು	1997 - 98ರ		1996-97ನೇ ಸಾಲಿನಲ್ಲಿ ವಿತರಿಸಿದ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳ ವಿವರ	
		ರಾಜ್ಯವಲಯ ಯೋಜನೆ ಪವರ್ ಟಿಲ್ಲರ್ ವಿತರಣೆ ಗುರಿ	ಕೇಂದ್ರವಲಯ ಯೋಜನೆ ಸಣ್ಣ ಟ್ರಾಕ್ಟರ್ ವಿತರಣೆಗುರಿ	ಟ್ರಾಕ್ಟರ್	ಪವರ್ ಟಿಲ್ಲರ್
1	2	3	4	5	6
1.	ಬೆಂಗಳೂರು (ನಗರ)	15	10	5	10
2.	ಬೆಂಗಳೂರು (ಗ್ರಾ)	15	10	6	21
3.	ಕೋಲಾರ	20	20	29	18
4.	ತುಮಕೂರು	15	20	30	19
5.	ಚಿತ್ರದುರ್ಗ	25	40	91	15
6.	ಶಿವಮೊಗ್ಗ	30	30	47	26
7.	ಮೈಸೂರು	20	10	15	21
8.	ಮಂಡ್ಯ	30	25	35	31
9.	ಕೊಡಗು	5	5	5	6
10.	ಹಾಸನ	15	10	13	10
11.	ಚಿಕ್ಕಮಗಳೂರು	15	10	10	17
12.	ದಕ್ಷಿಣ ಕನ್ನಡ (ಮಂಗಳೂರು)	15	10	15	16
13.	ಉತ್ತರ ಕನ್ನಡ (ಕಾರವಾರ)	15	10	30	17
14.	ಧಾರವಾಡ	2	50	139	3
15.	ಬೆಳಗಾಂ	2	20	45	2
16.	ಬಿಜಾಪುರ	2	20	47	-

1	2	3	4	5	6
17.	ರಾಯಚೂರು	10	30	41	5
18.	ಬಳ್ಳಾರಿ	2	30	44	-
19.	ಗುಲ್ಬರ್ಗಾ	2	20	26	3
20.	ಬೀದರ್	2	5	10	-
	ರಾಜ್ಯಮಟ್ಟದಲ್ಲಿ ಕಾಯ್ದಿರಿಸಿರುವುದು	**9**	**31**	**7**	**-**
	ಒಟ್ಟು	**266**	**416**	**690**	**240**

ಅನುಬಂಧ - 2

1997-8ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ ನಿಗಧಿಗೊಳಿಸಿರುವ ಪವರ್ ಟಿಲ್ಲರ್ ಮತ್ತು ಸಣ್ಣ ಟ್ರಾಕ್ಟರ್‌ಗಳ ವಿತರಣಾ ಗುರಿ.

ಕ್ರಮ ಸಂಖ್ಯೆ	ತಾಲ್ಲೂಕು	ಪವರ್ ಟಿಲ್ಲರ್ ವಿತರಣೆ ಗುರಿ	ಸಣ್ಣ ಟ್ರಾಕ್ಟರ್ ವಿತರಣೆ ಗುರಿ
1.	ಕೋಲಾರ	2	2
2.	ಮಾಲೂರು	2	1
3.	ಬಂಗಾರಪೇಟೆ	1	1
4.	ಮುಳಬಾಗಿಲು	2	2
5.	ಶ್ರೀನಿವಾಸಪುರ	2	2
6.	ಚಿಂತಾಮಣಿ	2	2
7.	ಚಿಕ್ಕಬಳ್ಳಾಪುರ	2	2
8.	ಶಿಡ್ಲಘಟ್ಟ	2	2
9.	ಗುಡಿಬಂಡೆ	1	2
10.	ಗೌರಿಬಿದನೂರು	2	2
11.	ಬಾಗೇಪಲ್ಲಿ	2	2
	ಒಟ್ಟು ಜಿಲ್ಲೆಯ ಗುರಿ	**20**	**20**

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಬೈರೇಗೌಡರವರು ಉತ್ತರವನ್ನು ಕೊಟ್ಟಿದ್ದಾರೆ. ಟ್ರಾಕ್ಟರ್ ಮತ್ತು ಪವರ್‌ಟಿಲ್ಲರ್ ಗಳನ್ನು ಹೆಚ್ಚಾಗಿ ವಿತರಿಸಲು ಸರಕಾರ ಬಯಸಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ತಿಳಿಸಿದ್ದಾರೆ. ಹೆಚ್ಚಾಗಿ ವಿತರಿಸುವುದಾದರೆ ಪ್ರತಿಯೊಂದು ತಾಲ್ಲೂಕಿಗೆ ಇಂತಿಷ್ಟು ಟ್ರಾಕ್ಟರ್ ಮತ್ತು ಟಿಲ್ಲರ್ ಎಂದು ನಿಗದಿ ಮಾಡತಕ್ಕಂತಹ ಆಲೋಚನೆ ಸರಕಾರಕ್ಕೆ ಇದೆಯೇ?

ಅಧ್ಯಕ್ಷರು : ಎಷ್ಟು ಜನ ಕೇಳಿದರೆ ಅಷ್ಟು ಜನರಿಗೆ ಕೊಡುತ್ತಾ ಹೋಗುತ್ತಾರೆ ಕೇಳುವವರೇ ಇಲ್ಲವಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೇಳುವವರು ಇದ್ದಾರೆ. ಇವರು ಏನು ಅನುದಾನ ಕೊಟ್ಟಿದ್ದಾರೆ ಅದರ ಬಗ್ಗೆ ವಿಷಯ ಸಮಿತಿಯಲ್ಲಿ ಒಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಹೆಚ್ಚು ಮಾಡಬೇಕೆಂದು ಸರಕಾರಕ್ಕೆ ಆ ಸಮಿತಿ ಸಲಹೆ ಕೊಟ್ಟಿದೆ. ಟಿಲ್ಲರ್‌ಗೆ ಇಷ್ಟು, ಟ್ರ್ಯಾಕ್ಟರ್‌ಗೆ ಇಷ್ಟು ಎಂದು ಅನುದಾನ ಕೊಡುತ್ತೀರಿ. ಆ ಅನುದಾನವನ್ನು ಹೆಚ್ಚು ಮಾಡಬೇಕೆಂಬ ಆಲೋಚನೆ ಸರಕಾರಕ್ಕೆ ಇದೆಯೇ? ಪ್ರತಿಯೊಂದು ತಾಲ್ಲೂಕಿಗೂ ಕೊಡಬೇಕೆಂದು ಇದ್ದೀರೋ ಇಲ್ಲವೋ, ಇಂತಿಷ್ಟು ಎಂದು ಏನಾದರೂ ನಿಗದಿ ಇದೆಯೇ? ನೀವು ಸಪ್ಲೈ ಮಾಡುವಂತಹ ಮಾಡಲ್ಸ್‌ಗಿಂತ ರೈತರು ಏನು ಕೊಡುತ್ತಾರೆ ಅದಕ್ಕೆ ಸರಕಾರ ಅನುಮತಿ ಕೊಡಬೇಕು ಎಂದು ಹೇಳಬಯಸುತ್ತೇನೆ. ರೈತರು ಕೊಡತಕ್ಕಂತಹ ಮಾಡಲ್ಸ್ ಅನ್ನು ತೆಗೆದುಕೊಳ್ಳಲಿಕ್ಕೆ ಸರಕಾರ ಅನುಮತಿ ಕೊಡಬೇಕು. ಈ ಮೂರು ಪ್ರಶ್ನೆಗಳಿಗೆ ಸಚಿವರು ಉತ್ತರ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಈ ಟ್ರ್ಯಾಕ್ಟರ್‌ಗಳನ್ನು ಕೊಡುತ್ತಿರುವಂಥಾದ್ದು ಕೇಂದ್ರದಿಂದ ಪುರಸ್ಕೃತವಾದ ಯೋಜನೆಯಿಂದ ಇದನ್ನು ಕೇಂದ್ರ ಸರಕಾರದವರೇ ನಿಗದಿ ಪಡಿಸಿದ್ದಾರೆ. ಎಷ್ಟೆಷ್ಟು ಹೆಚ್.ಪಿ.ಗೆ ಕೊಡಬೇಕೆಂದು ಅವರೇ ನಿಗದಿಪಡಿಸಿದ್ದಾರೆ. ರಾಜ್ಯಕ್ಕೇನೂ ಇದರಲ್ಲಿ ಅಧಿಕಾರವಿಲ್ಲ. ಹೆಚ್ಚು ಕಡಿಮೆ ಮಾಡತಕ್ಕಂಥಾದ್ದು ನಮ್ಮ ಕೈಯ್ಯಲ್ಲಿ ಇಲ್ಲ. 30 ಸಾವಿರಕ್ಕಿಂತ ಹೆಚ್ಚಿಗೆ ಕೊಡಿ ಎಂದು ಹೇಳುವುದು ಅಲ್ಲ. ಇನ್ನೂ ಹೆಚ್ಚು ಹೆಚ್ಚು ಟ್ರ್ಯಾಕ್ಟರ್‌ಗಳನ್ನು ಕೊಡಬೇಕಾದ ಅವಶ್ಯಕತೆ ಇದೆ ಎಂದು ನಾವು ಕೇಂದ್ರ ಸರಕಾರಕ್ಕೆ ತಿಳಿಸಿದ್ದೇವೆ. ತಾಲ್ಲೂಕು ಅಥವಾ ಜಿಲ್ಲಾ ಪಂಚಾಯತಿಯ ಮೂಲಕ ಹಂಚಿಕೆ ಮಾಡಿ ಎಂಬ ಸಲಹೆ ನೀಡುತ್ತಿದ್ದಾರೆ, ಅದು ಆಗುವುದಿಲ್ಲ. ಭೂ ಗುಣಕ್ಕೆ ಅನುಗುಣವಾಗಿ ಯಂತ್ರಗಳನ್ನು ನಾವು ಬಳಸಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಟ್ರ್ಯಾಕ್ಟರ್‌ಗಳನ್ನು ಬಳಸುವುದಕ್ಕಾಗುವುದಿಲ್ಲ, ಇನ್ನು ಕೆಲವು ಕಡೆಗಳಲ್ಲಿ ಟಿಲ್ಲರ್‌ಗಳನ್ನು ಬಳಸುತ್ತೇವೆ. ಅಲ್ಲಿ ಟ್ರ್ಯಾಕ್ಟರ್‌ಗಳನ್ನು ಬಳಸುವುದಕ್ಕಾಗುವುದಿಲ್ಲ. ಟ್ರ್ಯಾಕ್ಟರ್‌ಗಳನ್ನು ಬಳಸುವ ಕಡೆಗಳಲ್ಲಿ ಟಿಲ್ಲರ್‌ಗಳನ್ನು ಬಳಸುವುದಕ್ಕಾಗುವುದಿಲ್ಲ. ಬೆಟ್ಟ ಗುಡ್ಡ ಪ್ರದೇಶಗಳಲ್ಲಿ ಟ್ರ್ಯಾಕ್ಟರ್‌ಗಳನ್ನು ಬಳಸಲಿಕ್ಕಾಗುವುದಿಲ್ಲ ಅಂತಹ ಕೆಡೆಗಳಲ್ಲಿ ಟಿಲ್ಲರ್‌ಗಳನ್ನು ಬಳಸುತ್ತಾರೆ. ಸಾರಾ ಸಗಟಾಗಿ ತಾಲ್ಲೂಕಿಗೆ ಎಷ್ಟು, ಜಿಲ್ಲೆಗೆ ಇಷ್ಟು ಎಂದು ಹಂಚಿಕೆ ಮಾಡುವುದಕ್ಕಾಗುವುದಿಲ್ಲ. ಬೇಡಿಕೆಗನುಗುಣವಾಗಿ ನಾವು ಕೊಡಬೇಕಾಗುತ್ತದೆ. ಅನುಭವದ ಆಧಾರದ ಮೇಲೆ ಎಲ್ಲಿ ಹೆಚ್ಚು ಡಿಮ್ಯಾಂಡ್ ಇದೆ ಅದಕ್ಕನುಗುಣವಾಗಿ ಹೆಚ್ಚು ಮಾಡಿರತಕ್ಕಂತಹ ಸಂದರ್ಭ ಉಂಟು, ಕಡಿಮೆ ಮಾಡಿರತಕ್ಕಂತಹ ಸಂದರ್ಭ ಉಂಟು. ಒಟ್ಟಿನಲ್ಲಿ ರೈತರಿಗೆ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡತಕ್ಕಂತಹ ಕೆಲಸ ಮಾಡಿದ್ದೇವೆ. ಸರಕಾರದ ಉದ್ದೇಶವೂ ಅದೇ ಆಗಿದೆ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ : ಮೂಲಭೂತ ಪ್ರಶ್ನೆ ಇದೆ. ರೈತನಿಗೆ ತನಗೆ ಬೇಕಾದಂತಹ ಟ್ರ್ಯಾಕ್ಟರ್ ತೆಗೆದುಕೊಳ್ಳುವಂತಹ ಅನುಕೂಲ ಇದೆ. ಅವರೇನು ಆದೇಶ ಮಾಡುತ್ತಾರೆ ಎಂದರೆ ಆ ಟ್ರ್ಯಾಕ್ಟರ್ ಅನ್ನೇ ತೆಗೆದುಕೊಳ್ಳಬೇಕು ಎಂದು. ಕೇಂದ್ರ ಸರಕಾರದಿಂದ 30 ಹೆಚ್.ಪಿ.ಟ್ರಾಕ್ಟರ್ ಸಬ್ಸಿಡಿ ರೇಟಿನಲ್ಲಿ ಕೊಡುತ್ತಾರೆ. ರಾಜ್ಯ ಸರಕಾರ ಕೇಂದ್ರ ಸರಕಾರದ ಜೊತೆ ಮಾತನಾಡಿ ರೈತ ಯಾವ ಟ್ರ್ಯಾಕ್ಟರ್ ತೆಗೆದುಕೊಳ್ಳುತ್ತಾನೆ ಆ ಟ್ರ್ಯಾಕ್ಟರ್‌ಗೆ ಸಬ್ಸಿಡಿ ಕೊಡಬೇಕು. ಉದಾಹರಣೆಗೆ ಹೇಳುವುದಾದರೆ ಪವರ್ ಟಿಲ್ಲರ್ ಅಂದರೆ ಮಿಟ್‌ಸುಬಿಷಿ ಮಾತ್ರ ತೆಗೆದುಕೊಳ್ಳಬೇಕು ಎಂದು ಆಗಿತ್ತು. ನಾನು ಆ ಸಮಿತಿಯಲ್ಲಿ ಇದ್ದ ಮೇಲೆ ಸ್ಯಾಚಿ ಎಂದು ಚೈನಾದ ಕೊಲಾಬರೇಷನ್ ಅನ್ನು ಕೊಡಿಸುವಂತೆ ಆಯಿತು. ಟ್ರ್ಯಾಕ್ಟರ್‌ನಲ್ಲಿ ಏನಾಗಿದೆ ಎಂದರೆ 30 ಹೆಚ್.ಪಿ.ಗೆ ಮಾತ್ರ ತಾವು ಸಬ್ಸಿಡಿ ಕೊಡುವುದು. ಯಾವುದೋ ಕಂಪನಿಯಲ್ಲಿ ಖರ್ಚಾಗದೇ ಇರುವುದಕ್ಕೆ ಸಬ್ಸಿಡಿ ಕೊಟ್ಟು ತಾವು ಕೊಡಿಸುತ್ತಿದ್ದೀರೇನೋ ಎಂದು ನನಗನ್ನಿಸುತ್ತದೆ. ಸಮಗ್ರ ಎಷ್ಟು ಹೆಚ್.ಪಿ.ಗೆ ಅವಶ್ಯಕತೆ ಇದೆ, ಅಂದರೆ ರೈತರ ಜಮೀನಿನ ಆಧಾರದ ಮೇಲೆ ನನ್ನ ಉಪಯೋಗಕ್ಕೆ ಎಷ್ಟು ಹೆಚ್.ಪಿ.ಅವಶ್ಯಕತೆ ಇದೆ ಅದಕ್ಕೆ ತಾವು ಸಬ್ಸಿಡಿ ಕೊಡಬೇಕು.

ಶ್ರೀ ಸಿ. ಬೈರೇಗೌಡ : ನಾವು ಎಲ್ಲ ರೈತರಿಗೂ ಅಂದರೆ 50-100 ಹೆಚ್.ಪಿ. ಟ್ರ್ಯಾಕ್ಟರ್‌ಗೆ ಸಬ್ಸಿಡಿ ಕೊಡಿ ಎಂದರೆ ಅದು ಕಷ್ಟ, ಆಗುವುದಿಲ್ಲ. ಕಡಿಮೆ ಶಕ್ತಿ ಇರತಕ್ಕಂತಹ ಹೆಚ್ಚು ಶಕ್ತಿ ಇರತಕ್ಕಂತಹ ರೈತರೂ ಇದ್ದಾರೆ. ಕಡಿಮೆ ಶಕ್ತಿ ಇರತಕ್ಕಂತಹ ರೈತರಿಗೆ ಕಡಿಮೆ ಆರ್ಥಿಕ ಬಲ ಇರುವವರಿಗೆ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ನಾವು ಇಂತಹ ಮಾಡೆಲ್ ಅನ್ನೇ ತೆಗೆದುಕೊಳ್ಳಬೇಕೆಂದು ನಿಗದಿ ಪಡಿಸಿಲ್ಲ. ಹೆಚ್.ಪಿ.ಮಾತ್ರ ನಿಗದಿ ಪಡಿಸಿದ್ದೇವೆ. ಪಿ.ಟಿ.ಓ.30 ಹೆಚ್.ಪಿ.ಗೆ ಮಾತ್ರ ಕೊಡಬೇಕಂದು ನಿಗದಿ ಪಡಿಸಿದ್ದೇವೆ. ಖರ್ಚಾಗದೇ ಇರುವಂತಹ ಟ್ರ್ಯಾಕ್ಟರ್ ಕೊಂಡುಕೊಳ್ಳಲಿ ಎಂಬ ಉದ್ದೇಶದಿಂದ ಅಲ್ಲ. ರೈತರು ಇಂತಹ ಮಾಡೆಲ್‌ನದ್ದು ಬೇಕು ಎಂದರೆ 30 ಹೆಚ್.ಪಿ.ಗಿಂತ ಒಳಗೆ ಇರುವುದನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಇದೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದಕ್ಕೆ ಬಹಳ ಕಷ್ಟವಾಗುತ್ತದೆ. ಆರ್ಥಿಕವಾಗಿ ಬಲ ಇರತಕ್ಕಂತಹ ಎಲ್ಲಾ ರೈತರಿಗೂ ರಿಯಾಯಿತಿ ಕೊಡಬೇಕು ಎಂದರೆ ಕಷ್ಟವಾಗುತ್ತದೆ. ಕೇಂದ್ರ ಸರಕಾರ ಒದಗಿಸಿರತಕ್ಕಂತಹ ಹಣ ಸೀಮಿತವಾಗಿರುವುದರಿಂದ ಅಷ್ಟು ದೊಡ್ಡ 50-70 ಹೆಚ್.ಪಿ. ಟ್ರ್ಯಾಕ್ಟರ್ ಅನ್ನು ಕೊಂಡು ಕೊಳ್ಳಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ನಾನೇ 50 ಹೆಚ್.ಪಿ. ಟ್ರಾಕ್ಟರ್‌ಅನ್ನು ಕೊಂಡು ಕೊಂಡೆ ಅದಕ್ಕೆ ಸಬ್ಸಿಡಿ ಸಿಗಲಿಲ್ಲ. ಶಕ್ತಿ ಇರತಕ್ಕಂತಹ ದೊಡ್ಡ ರೈತರಿಗೆ ಸಬ್ಸಿಡಿ ಕೊಡಬೇಕೆಂದರೆ ಕಷ್ಟವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಶಕ್ತಿ ಇರತ್ಕಕಂತಹ ರೈತರಿಗೆ ಸಬ್ಸಿಡಿ ಕೊಡಬೇಡಿ. ಕಡಿಮೆ ಶಕ್ತಿ ಇರತಕ್ಕಂತಹ ರೈತರಿಗೆ ಏನು ಸಬ್ಸಿಡಿ ಕೊಡುತ್ತಿದ್ದೀರಿ ಅವರಿಗೇ ಅದನ್ನು ಕಡ್ಡಾಯ ಮಾಡಿ 50 ಹೆಚ್.ಪಿ.ತೆಗೆದುಕೊಳ್ಳಬೇಕೆಂದು ನೀವು ಹೇಳಬಹುದಲ್ಲವೇ?

ಶ್ರೀ ಚಂದ್ರಕಾಂತ ಬೆಲ್ಲದ್ : ಸರಕಾರ ಯಾವ ಟ್ರ್ಯಾಕ್ಟರ್‌ಗೆ ಸಬ್ಸಿಡಿ ಕೊಡುತ್ತಿದೆಯೋ ಅಥವಾ ಯಾವ ರೈತರಿಗೆ ಸಹಾಯ ಮಾಡಬೇಕು ಅದು ಅವರಿಗೆ ಉಪಯೋಗ ಮಾಡಬೇಕೆನ್ನುವುದು ಇದೆಯೋ ಅದು ಒಳ್ಳೆಯ ಯೋಜನೆ. ಆ ರೈತ ಯಾವ ಟ್ರ್ಯಾಕ್ಟರ್ ಅನ್ನು ಆ ಹೆಚ್ ಪಿ ಪವರ್‌ನಲ್ಲಿ

ಎಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತಾನೆ ಅಲ್ಲೇ ತೆಗೆದುಕೊಳ್ಳಲಿಕ್ಕೆ ಅನುಕೂಲ ಮಾಡಿಕೊಡಿ. ಇಲ್ಲೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೀರಿ. ರೈತರಿಗೆ ಸರ್ವೀಸ್ ಸಿಗಬೇಕಲ್ಲ. ಖರೀದಿ ಮಾಡಿದ ಮೇಲೆ ಸರ್ವೀಸ್ ಗ್ಯಾರಂಟಿ ಸಿಗಬೇಕಾದರೆ ತನಗೆ ಎಲ್ಲಿ ಬೇಕೋ ಅಲ್ಲಿ ಅಂದರೆ ಗುಲ್ಬರ್ಗದಲ್ಲಿ ಮಾಡಿಸುತ್ತಾನೆ ಆದ್ದರಿಂದ ಅಲ್ಲೇ ತೆಗೆದುಕೊಳ್ಳಲಿಕ್ಕೆ ಅನುಕೂಲ ಮಾಡಿಕೊಡಬೇಕು. ರೈತರು ಎಲ್ಲರೂ ರಾಜ್ಯಕ್ಕೆ ರಾಷ್ಟ್ರಕ್ಕೆ ಉತ್ಪಾದನೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಸಮಯವಾಗುತ್ತದೆ ಇದರಲ್ಲಿ ಚರ್ಚೆಗೆ ಅವಕಾಶವಿಲ್ಲ ಎರಡನ್ನೂ ಸೇರಿಸಿ ತಾವು ಉತ್ತರ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಿಕಾರಿಪುರ ತಾಲ್ಲೂಕಿಗೆ ಸಂಬಂಧಪಟ್ಟಂತೆ ನಾನು ಅವರ ಹತ್ತಿರ ದೂರವಾಣಿ ಮೂಲಕ ಮಾತನಾಡಿದೆ. ಒಂದೆರಡು ಟ್ರ್ಯಾಕ್ಟರ್ ಅನ್ನು ಹೆಚ್ಚು ಕೊಟ್ಟರು. ಆದರೆ ಯಾರೂ ಕೊಂಡು ಕೊಳ್ಳುವುದಕ್ಕೆ ಮುಂದೆ ಬರಲಿಲ್ಲ. ಯಾವ ಬಡವರು ತೆಗೆದುಕೊಳ್ಳಬೇಕು ಎಂದು ತಾವು ಹೇಳುತ್ತೀರೋ ಅವರೇ ಮುಂದೆ ಬರಲಿಲ್ಲ. ತಾವು ಅವರಿಗೆ 50 ಹೆಚ್.ಪಿ.ತೆಗೆದುಕೊಳ್ಳಲಿಕ್ಕೆ ಅವಕಾಶ ಕೊಟ್ಟರೆ ತನ್ನ 7-8 ಎಕರೆ ಜಮೀನನ್ನು ಉಳುಮೆ ಮಾಡಿಕೊಳ್ಳುತ್ತಾನೆ. ಅದನ್ನು ಬಾಡಿಗೆಗೆ ಕೊಟ್ಟು ಬದುಕುವಂತಹ ವ್ಯವಸ್ಥೆಯಾಗುತ್ತದೆ. ಅವನು ಇದರಿಂದ ಸಾಲಗಾರನಾಗುತ್ತಾನೆ. ತಾವು ಆಗ್ರೋ ಇಂಡಸ್ಟ್ರೀಸ್‌ನಿಂದಲೇ ತೆಗೆದುಕೊಳ್ಳಿ ಎಂದು ಏಕೆ ಇನ್‌ಸಿಸ್ಟ್ ಮಾಡುತ್ತೀರಿ. ಅಕಸ್ಮಾತ್ ಹೆಚ್ಚು ಹೆಚ್ ಪಿ ಜಾಸ್ತಿ ಮಾಡುವುದಕ್ಕಾಗುವುದಿಲ್ಲವೆಂದರೆ 30 ಹೆಚ್.ಪಿ. ನಲ್ಲೇ ಅವನು ಎಲ್ಲಿ ಬೇಕಾದರೂ ಕೊಂಡಕೊಳ್ಳುವ ಅವಕಾಶ ಮಾಡಿಕೊಡಿ. ಆಗ್ರೋ ಇಂಡಸ್ಟ್ರೀಸ್‌ನಿಂದಲೇ ಕೊಂಡುಕೊಳ್ಳಿ ಎಂದು ಏಕೆ ಇನಸಿಸ್ಟ್ ಮಾಡುತ್ತೀರಿ ?

ಶ್ರೀ ಸಿ. ಬೈರೇಗೌಡ : ಎಲ್ಲಾ ಕಡೆ ಕೊಂಡು ಕೊಳ್ಳುವ ಅವಕಾಶ ಕೊಡುವುದಕ್ಕಾಗುವುದಿಲ್ಲ. ನಮ್ಮ ಆಗ್ರೋ ಕೈಗಾರಿಕಾ ಸಂಸ್ಥೆ ಏನು ಇದೆ ಅದರಿಂದಲೇ ಕೊಂಡು ಕೊಳ್ಳಬೇಕಾಗುತ್ತದೆ. ಈ ಸಂಸ್ಥೆ ರೈತರ ಹಿತದೃಷ್ಟಿಯಿಂದ ಇದೆ. ಲಾಭದಾಯಕವಾಗಿ ಇರತಕ್ಕಂಥಾದ್ದನ್ನು ಬೇರೆಯವರಿಗೆ ಕೊಟ್ಟು ಲಾಭದಾಯಕವಾಗಿಲ್ಲದೇ ಇರತಕ್ಕಂತಹ ಸಂಸ್ಥೆಯನ್ನು ನೀವು ಮಾಡಿ ಎಂದರೆ ಅದು ಸರಿಯಾಗುವುದಿಲ್ಲ. ಆ ಸಂಸ್ಥೆ ಕೂಡ ಇರಬೇಕಾಗುತ್ತದೆ. ಆ ಕಾರಣದಿಂದಲೇ ಈ ವಿತರಣಾ ವ್ಯವಸ್ಥೆಯನ್ನು ಅವರಿಗೆ ವಹಿಸಿದ್ದೇವೆ. ಎಲ್ಲ ಕಡೆ ಬಡ ರೈತರು ಖಾಸಗಿ ಡೀಲರ್ಸ್ ಹತ್ತಿರ ತೆಗೆದುಕೊಳ್ಳುತ್ತೇವೆ ಎಂದರೆ ಅದು ಸರಕಾರದ ನೀತಿ ಅಲ್ಲ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಆ ಸಣ್ಣ ರೈತರಿಗೆ ಹೆಚ್ಚು ಹೆಚ್.ಪಿ. ಟ್ರ್ಯಾಕ್ಟರ್ ಟಿಲ್ಲರ್ ಕೊಡಿ ಎಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಇದಕ್ಕೆ ಬೇಡಿಕೆ ಸಾಕಷ್ಟು ಇದೆ. 30 ಹೆಚ್.ಪಿ. ಟ್ರ್ಯಾಕ್ಟರ್‌ಗೆ ಹೆಚ್ಚು ಬೇಡಿಕೆ ಇದೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಯಡಿಯೂರಪ್ಪನವರು ಹೇಳಿದ್ದು ಏನೆಂದರೆ ಸಣ್ಣ ರೈತರಿಗೇ ಹೆಚ್ಚು ಹೆಚ್.ಪಿ. ತೆಗೆದುಕೊಳ್ಳುವುದಕ್ಕೆ ಬಿಟ್ಟರೆ ಅವರದ್ದನ್ನು ಉಳುಮೆ ಮಾಡಿಕೊಳ್ಳುವುದಲ್ಲದೇ ಬಾಡಿಗೆಗೆ ಕೊಡುತ್ತಾರೆ ಅದರಿಂದಾಗಿ ಸಾಲ ವಾಪಸ್ ಕಟ್ಟಲಿಕ್ಕೆ ಅನುಕೂಲದಾಗುತ್ತದೆಂದು ಹೇಳಿದ್ದಾರೆ. ತಾವು ಪರಿಶೀಲನೆ ಮಾಡಿ.

ಶ್ರೀ ಸಿ. ಬೈರೇಗೌಡ : ಬೇಡಿಕೆಯೇ ಇಲ್ಲದಿದ್ದರೆ ನಾವು ಆದನ್ನು ಆಲೋಚನೆ ಮಾಡಬಹುದಿತ್ತು. ಈಗ ಸಾಕಷ್ಟು ಬೇಡಿಕೆ ಇದೆ. ಮಾನ್ಯ ಶಿವಪ್ಪನವರು ಕ್ಷೇತ್ರದಲ್ಲಿ 50 ಕೊಡಿ ಎಂದು ಕೇಳುತ್ತಾರೆ. 30 ಹೆಚ್.ಪಿ.ಗಿಂತ ಹೆಚ್ಚು ಕೊಡಬೇಕೆಂಬ ಬಗ್ಗೆ ವೈಯಕ್ತಿಕವಾಗಿ ಮತ್ತು ಸರಕಾರಕ್ಕೆ ಇಚ್ಛೆ ಕೂಡ ಇಲ್ಲ.

ಅಂಗನವಾಡಿ ಮಕ್ಕಳಿಗೆ ಆಹಾರ ಪೂರೈಕೆ

299 - ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಮಕ್ಕಳಿಗೆ ಸರಿಯಾಗಿ ಆಹಾರ ಒದಗಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕಾರಣಗಳೇನು?

ಆ) ಇದರಿಂದಾಗಿ ಸರ್ಕಾರದ ಉದ್ದೇಶವೇ ವಿಫಲ ವಾಗುವುದಿಲ್ಲವೇ?

ಇ) ಇದನ್ನು ಸರಿಪಡಿಸಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ರಾಜ್ಯದ ಅಂಗನವಾಡಿ ಮಕ್ಕಳಿಗೆ ಆಹಾರವನ್ನು ಒದಗಿಸುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ನನಗೆ ತಿಳಿದಿರುವಂತೆ ಅಂಗನವಾಡಿ ಕೇಂದ್ರಗಳಿಗೆ ಆಹಾರವನ್ನು ಸರಿಯಾಗಿ ಒದಗಿಸುತ್ತಿಲ್ಲ. ಆದರೆ ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲವೆಂದು ಸಚಿವರು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಇದರ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ದೂರು ಬರುತ್ತಿದೆ. ಸುಮಾರು 3-4 ತಿಂಗಳುಗಳಿಂದ ಪೌಷ್ಟಿಕ ಆಹಾರವನ್ನು ಬಿಡುಗಡೆ ಮಾಡುತ್ತಿಲ್ಲ. ಅಂಗನವಾಡಿ ಕೇಂದ್ರಗಳಿಗೆ ಅಕ್ಕಿ, ಸೋಯಾ ರವೆ, ಪೌಷ್ಟಿಕ ಆಹಾರ ಈ ಮೂರು ರೀತಿಯ ಪೌಷ್ಟಿಕ ಆಹಾರವನ್ನು ಒದಗಿಸುತ್ತಾರೆಂದು ನನಗೆ ತಿಳಿದಿದೆ. ಕೆಲವು ಕಡೆಗಳಲ್ಲಿ ಕೇವಲ ಅಕ್ಕಿಯನ್ನು, ಮತ್ತೆ ಕೆಲವು ಕಡೆಗಳಲ್ಲಿ ಪೌಷ್ಟಿಕ ಆಹಾರವನ್ನು ಮಾತ್ರ ಒದಗಿಸುತ್ತಿದ್ದಾರೆ. ಕೆಲವು ಅಂಗನವಾಡಿ ಕೇಂದ್ರಗಳಿಗೆ ಯಾವುದನ್ನೂ ಒದಗಿಸುತ್ತಿಲ್ಲ. ಈ ರೀತಿ ಸರಿಯಾದ ಹೊಂದಾಣಿಕೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಅಂಗನವಾಡಿ ಕೆಂದ್ರಗಳಿಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ನಾವು ಮಕ್ಕಳನ್ನು ದೇವರಿಗೆ ಸಮಾನವೆಂದು ಹೇಳುತ್ತೇವೆ. ಅಂಗನವಾಡಿ ಕೇಂದ್ರದ ಮುಖ್ಯವಾದ ಉದ್ದೇಶವೆಂದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮಾಡುವುದಾಗಿದೆ. ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡದಿದ್ದಾಗ ಅವರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಾಗಲು